ಓ ಎಸ್ ನಂಃ 10/2015
ಪಿ ಡಬ್ಲ್ಯೂ ಃ 1

ದಿಃ 30.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಎನ್ ವಕೀಲರಿಂದ ಃ-

ತಾವು 1995 ನೇ ಸಾಲಿನಿಂದ ಅಜ್ಜನಹಳ್ಳಿ ಗ್ರಾಮಪಂಚಾಯತಿಯಿಂದ ಖಾಯಂ ಜಲಗಾರನಾಗಿ ಕಾರ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಹಂಗಾಮಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ದಿಃ 30.10.2014 ರಲ್ಲಿ ಬೆಂಗಳೂರು ಜಿಲ್ಲಾ ಪಂಚಾಯ್ತಿ ಯವರು ತಮ್ಮನ್ನು ಖಾಯಂ ಜಲಗಾರ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ತಾವು ಖಾಯಂ ಜಲಗಾರನಾಗಿದ್ದರೂ ಸಹ ತಾವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1995 ನೇ ಸಾಲಿನಿಂದ ತಾವರೆಕೆರೆ ರೆವಿನ್ಯೂ ವೃತ್ತದ ಕಂದಾಯ ಅಧಿಕಾರಿಗಳು ತಮಗೆ ಪರಿಚಯ ಇದ್ದರು ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳು ತಮಗೆ ಪರಿಚಯ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ. ಯಾವ ದಿನ ಮತ್ತು ಯಾವ ಸ್ಥಳದಲ್ಲಿ ಪೂಜಾ ಅರಸಯ್ಯನ ಮಗ ಹನುಮಯ್ಯ ನವರು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ 10.02.1996 2 ನೇ ಕರಾರು ಪತ್ರ 30.06.1999. ಸದರಿ ಕರಾರು ಪತ್ರಗಳು ನಮ್ಮ ಊರಿನ ಅಶ್ವಥ ಕಟ್ಟೆಯ ಬಳಿ ಬರೆದಿರುತ್ತಾರೆ. ಕ್ರಯದ ಕರಾರು ಪತ್ರಗಳು ಯಾವ ಸರ್ವೆ ನಂ. ಗೆ ಸಂಬಂಧಪಟ್ಟಿದ್ದು ಎಂದರೆ ಸರ್ವೆ ನಂ. 96/8 ವಿಸ್ತೀರ್ಣ 2 ಎಕರೆ 30 ಗುಂಟೆ ಮತ್ತು ಖರಾಬು 15 ಗುಂಟೆ, 97/5 2 ಎಕರೆ 6 ಗುಂಟೆ ಮತ್ತು 5 ಗುಂಟೆ ಖರಾಬು ಸರ್ವೆ ನಂ. 97/5 2 ಎಕರೆ 5 ಗುಂಟೆ ಸ್ವತ್ತು 1929 ನೇ ಸಾಲಿನಿಂದ ಕಂದಾಯ ದಾಖಲಾತಿಯಲ್ಲಿ "ಪಡ" ಎಂದು ನಮೂದಾಗಿದೆ ಎಂದರೆ ಸರಿ. "ಪಡ" ವನ್ನು ವಜಾ ಮಾಡಿ ಐನು ಜಮೀನಾಗಿ ಮಾಡಿಕೊಡಬೇಕೆಂದು ಹನುಮಯ್ಯನವರು ಅರ್ಜಿ ಸಲ್ಲಿಸಿರುವುದಿಲ್ಲ. ಹನುಮಯ್ಯನವರಿಗೆ ದಿಃ 10.02.1996 ಮತ್ತು 30.06.1999 ರಂದು ಕ್ರಯ ಪತ್ರಗಳು ಬರೆದುಕೊಡಲು ಸರ್ವೆ ನಂ. 97/5 ರಲ್ಲಿ ಹನುಮಯ್ಯನವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ತಾವು ಕ್ರಯದ ಕರಾರುಗಳ ಬಾಬ್ತು ಹನುಮಯ್ಯನವರಿಗೆ ಹಣ ಸಂದಾಯ ಮಾಡಿದ್ದೀವಿ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಮ್ಮ ಹೆಸರಿಗೆ ಯಾವುದೇ ಕ್ರಯದ ಕರಾರು ಪತ್ರಗಳು ಆಗಿಲ್ಲ ನೀವು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರಗಳಿಗೂ ಹನುಮಯ್ಯ ಮತ್ತು ಆತನ ಹೆಂಡತಿ ಮುತ್ತಮ್ಮ ನವರಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹನುಮಯ್ಯನ ಜೀವಿತಾವಧಿಯಲ್ಲಿ ಮೇಲೆ ಈ ಮೇಲೆ ಹೇಳಿದ ಕರಾರು ಪತ್ರಗಳು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹನುಮಯ್ಯನವರು ಮರಣ ಹೊಂದಿದ ನಂತರ ಕ್ರಯದ ಕರಾರು ಪತ್ರಗಳನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಹನುಮಯ್ಯನವರು ದಿಃ 15.09.1999 ರಲ್ಲಿ ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಒಂದು ಮರಣ ಶಾಸನವನ್ನು ಬರೆದಿರುತ್ತಾರೆ. ಹನುಮಯ್ಯನ ಮರಣದ ನಂತರ ಈ ದಾವೆಗೋಸ್ಕರ ಮರಣ ಶಾಸವನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಹನುಮಯ್ಯ ಮತ್ತು ಮುತ್ತಮ್ಮ ಹಾಗೂ ಹನುಮಯ್ಯನ ತಂದೆ ಪೂಜಅರಸಯ್ಯನವರು ನನ್ನ ಸಂಬಂಧಿಕರಲ್ಲ. ಕೃಷ್ಣಪ್ಪ ನವರು ಹಾಗೂ ನಮ್ಮ ನಡುವೆ ಯಾವ ಸಂಬಂಧ ಇಲ್ಲ. ಆರ್ ಎ (ಎಸ್) 444/14-15 ಕೃಷ್ಣಪ್ಪನವರು ಸಲ್ಲಿಸಿರುವ ಮೇಲ್ಮನವಿ ಉಪ ವಿಭಾಗಾಧಿಕಾರಿಗಳು ಬೆಂಗಳೂರು ದಕ್ಷಿಣ ಪುರಸ್ಕರಿಸಿ ಸದರಿ ಆದೇಶದಲ್ಲಿ ಹನುಮಯ್ಯ ಮತ್ತು ಮುತ್ತಮ್ಮ ನವರು ವಾರಸುದಾರರು ಯಾರಾದರೂ ಇದ್ದರೆ ಸಿವಿಲ್ ನ್ಯಾಯಾಲಯದಿಂದ ಆದೇಶ ಬಂದರೆ ಖಾತೆ ಮಾಡುತ್ತೇವೆ ಎಂದು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರ್ ಎ (ಎಸ್) 444/14-15 ಪ್ರಕರಣದಲ್ಲಿ ತಾವು ಮತ್ತು ತಮ್ಮ ಅಣ್ಣ ಪಕ್ಷಗಾರರು ಎಂದರೆ ಸರಿ. ಆರ್ ಎ (ಎಸ್) 444/14-15 ಪ್ರಕರಣದ ಆದೇಶದ ವಿರುದ್ಧ ನಾವು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಹಾಗೂ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. ತಾವು ಸಲ್ಲಿಸಿರುವ ಅಸಲು ದಾವಾ ಸಂಖ್ಯೆ 449/11 ಈ ದಾವೆಯ ಪ್ರತಿವಾದಿಗಳಾದ ಸಿದ್ದಪ್ಪ ಮತ್ತು ನರಸಿಂಹಮೂರ್ತಿ ಪಕ್ಷಗಾರರು ಅಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯು ಮಾಲೀಕತ್ವ ಕೋರಿ ಸಲ್ಲಿಸಿರುವ ದಾವೆ ಅಲ್ಲ ಎಂದರೆ ಸಾಕ್ಷಿ ಶಾಶ್ವತ ನಿರ್ಬಂದಕಾಜ್ಞೆ ಕೋರಿ ಸಲ್ಲಿಸಿರುವ ದಾವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ರಾಮನಗರ ಜಿಲ್ಲಾ

**ಓ ಎಸ್ ನಂಃ 10/2015**

**ಪಿ ಡಬ್ಲ್ಯೂ ಃ 1**

ನ್ಯಾಯಾಲಯದಲ್ಲಿ ಪಿ ಅಂಡ್ ಎಸ್ ಸಿ 5/2012 ದಿಃ 30.06.2012 ರ ಆದೇಶದ ಮೇರೆಗೆ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಆರ್ ಆರ್ ಟಿ ಸಿ ಆರ್ 91/2012-13 ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯು ಮೋಸದಿಂದ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಸದರಿ ಆರ್ ಆರ್ ಟಿ ಸಿ ಆರ್ 91/2012-13 ಪ್ರಕರಣದ ಅನ್ವಯ ದಾವಾ ಆಸ್ತಿಗಳ ಖಾತೆಯು ಮೊದಲನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ತಾವು ಸಲ್ಲಿಸಿರುವ ಕಂದಾಯ ಮೇಲ್ಮನವಿಯು ಉಪ ವಿಭಾಗಾಧಿಕಾರಿಗಳು ವಜಾ ಮಾಡಿದ್ದಾರೆ ಎಂದರೆ ಸಾಕ್ಷಿ ಸಿವಿಲ್ ನ್ಯಾಯಾಲಯದ ಆದೇಶದ ಅನ್ವಯ ಖಾತೆ ವರ್ಗಾವಣೆ ಮಾಡಬೇಕೆಂದು ಸದರಿ ಕಂದಾಯ ಮೇಲ್ಮನವಿ ವಜಾ ಆಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ಸಹ ವಜಾ ಆಗಿದೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮಾಡಿರುವ ಆದೇಶದ ವಿರುದ್ಧ ತಾವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. 2015 ನೇ ಸಾಲಿನಲ್ಲಿ ತಾವು ಸಲ್ಲಿಸಿರುವ ರಿವಿಜನ್ ಪಿಟೀಷನ್ ವಜಾ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ನಾವು ಸಿವಿಲ್ ನ್ಯಾಯಾಲಯದಲ್ಲಿ ಈ ದಾವೆ ಹೂಡಿದ್ದೇವೆ. ಪಿ ಅಂಡ್ ಎಸ್ ಸಿ 5/2012 ಆದೇಶದ ದಿನಾಂಕಃ 30.06.2012 ಪ್ರಶ್ನೆ ಮಾಡಿ ರಾಮನಗರದ ಜಿಲ್ಲಾ ನ್ಯಾಯಾಲಯದಲ್ಲಿ ಮಿಸ್ 10/2014 ನ್ನು ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯು ವಜಾ ಆಗಿದೆ ಎಂದರೆ ಸಾಕ್ಷಿಯು ಈ ಪ್ರಕರಣ ರಾಮನಗರ ಜಿಲ್ಲಾ ನ್ಯಾಯಾಲಯ ವ್ಯಾಪ್ತಿಗೆ ಬರುವುದಿಲ್ಲ ತಾವು ಮಾಗಡಿ ನ್ಯಾಯಾಲಯಕ್ಕೆ ಹೋಗಿ ಎಂದು ನಮೂದು ಮಾಡಿ ನಮ್ಮ ಅರ್ಜಿ ವಜಾ ಆಗಿ ಸದರಿ ವಿಚಾರದ ಬಗ್ಗೆ ತಾವು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಿಸ್ 10/2014 ಆದೇಶದ ವಿರುದ್ಧ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಎಂ ಎಫ್ ಎ ನಂ. 9940/2013 ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ಹೋಗಿ ವಿವಾದವನ್ನು ಇತ್ಯರ್ಥ ಪಡಿಸಿಕೊಳ್ಳಿ ನಿರ್ದೇಶನ

ನೀಡಿ ನಾವು ಸಲ್ಲಿಸಿರುವ ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ. ತಾವು ಈ ನ್ಯಾಯಾಲಯಕ್ಕೆ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನಾನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 833/2014 ರ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸಿದ್ದಪ್ಪನ ವಿರುದ್ಧ ಸಲ್ಲಿಸಿರುತ್ತಾರೆ. ಅಸಲು ದಾವಾ ಸಂಖ್ಯೆ 833/2014 ಹಾಗೂ ಈ ದಾವೆಯ ಪ್ರತಿವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 833/2014 ನ್ನು ತಾವು ಮತ್ತು ಹನುಮಂತರಾಯಪ್ಪ ಸೇರಿ ಸಲ್ಲಿಸಿರುವ ದಾವೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 449/11 ತಾವು ಮತ್ತು ಕಾಪಿ ಮಲ್ಲಯ್ಯನ ಮಕ್ಕಳು ಸಲ್ಲಿಸಿ ಮೋಸದಿಂದ ಡಿಕ್ರಿಯನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ದಾವಾ ಸ್ವತ್ತಿಗೆ ನಾವೇ ಮಾಲೀಕರು ಎಂದು ಘೋಷಿಸಬೇಕೆಂದು ಸಲ್ಲಿಸಿದ್ದೇವೆ. ದಾವಾ ಸ್ವತ್ತಿಗಳಿಗೆ ತಾವೇ ಮಾಲೀಕರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಸಮಯದಿಂದ ಇಲ್ಲಿಯ ತನಕ ದಾವಾ ಅನುಸೂಚಿ ಒಂದರ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಒಂದರ ಸ್ವತ್ತಿನ ಕಂದಾಯ ದಾಖಲಾತಿಗಳು 1 ನೇ ಪ್ರತಿವಾದಿ ಹೆಸರಿನಲ್ಲಿದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ಪೂಜಅರಸಯ್ಯನವರು ಮರಣ ಹೊಂದಿದ ನಂತರ ಆತನ ಮಗ ಮತ್ತು ಹೆಂಡತಿ ಹಾಗು ಮೊದಲನೆ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎರಡರ ಸ್ವತ್ತು ದಾವಾ ಹೂಡುವ ಸಮಯದಲ್ಲಿ ಸರ್ಕಾರದ ಪಡ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಅನುಸೂಚಿ ಎರಡರ ಸ್ವತ್ತು ಸರ್ಕಾರದ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎರಡರ ಸ್ವತ್ತಿನಲ್ಲಿ ಸಿದ್ದಪ್ಪನವರೇ ಸ್ವಾಧೀನಾನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಿಃ 19.07.2012 ರಂದು ಸಿದ್ದಪ್ಪನವರ

ಕುಟುಂಬದವರು ತಮ್ಮ ಕುಟುಂಬದ ವಿರುದ್ಧ ಒಂದು ದೂರನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ನಾವು ಸಹ ಅವರ ವಿರುದ್ಧ ದೂರನ್ನು ದಾಖಲು ಮಾಡಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ವಿಚಾರವನ್ನು ತಮ್ಮ ವಾದ ಪತ್ರದಲ್ಲಾಗಲಿ ಅಥವಾ ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಆಗಲಿ ಆ ರೀತಿ ನಮೂದು ಮಾಡಿದ್ದೀರ ಎಂದರೆ ಸಾಕ್ಷಿಯು ಮಾಡಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿಃ 19.07.2012 ರಂದು ತಾವು ತಮ್ಮ ಕುಟುಂಬದ ಸದಸ್ಯರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಇನ್ನು ಮುಂದೆ ಸಿದ್ದಪ್ಪನವರ ಕುಟುಂಬಕ್ಕೆ ಯಾವುದೇ ರೀತಿ ತೊಂದರೆ ಕೊಡುವುದಿಲ್ಲ ಎಂದು ತಾವರೆಕೆರೆ ಪೋಲಿಸ್ ಠಾಣೆಯಲ್ಲಿ ಒಂದು ಹಿಂಬರಹವನ್ನು ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಹನುಮಯ್ಯನವರು ಮರಣ ಹೊಂದಿದ ನಂತರ ಇಲ್ಲಿಯ ತನಕ ಸಿದ್ದಪ್ಪನ ಮಕ್ಕಳು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತೊಂದರೆ ನೀಡಿರುತ್ತಾರೆ. ಹನುಮಯ್ಯನವರು 1999 - 2000 ನೇ ಇಸವಿಯಲ್ಲಿ ತೊಂದರೆ ಕೊಟ್ಟಿರುತ್ತಾರೆ. ಅದರ ವಿರುದ್ಧ ಕಾನೂನು ಕ್ರಮ ಜರುಗಿಸಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಮಗೆ ಹಿತಾಸಕ್ತಿ ಇಲ್ಲದ ಕಾರಣ ಪ್ರತಿವಾದಿಗಳು ತಮಗೆ ತೊಂದರೆ ಕೊಡುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಹನುಮಯ್ಯನ ಮರಣಾ ನಂತರ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿರುವ ಕಾರಣ ಪ್ರತಿವಾದಿಗಳು ತಮಗೆ ತೊಂದರೆ ಕೊಡುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ತಾವು ಪ್ರತಿವಾದಿಗಳ ವಿರುದ್ದ ದೂರನ್ನು ನೀಡಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ರಾಮನಗರದ ಜಿಲ್ಲಾ ನ್ಯಾಯಾಲಯದಲ್ಲಿ ತಾವು ಸಲ್ಲಿಸಿರುವ ಮಿಸ್ ಅರ್ಜಿಯಲ್ಲಿ ತಾವು ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ಈ ಮೇಲ್ಕಂಡ ರಂತೆ ಹೇಳಿರುವಂತೆ ಹಾಗೆ ಯಾವುದೇ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ತಮಗೆ ಯಾವುದೇ ಹಕ್ಕು, ಹಿತಾಸಕ್ತಿ, ಮಾಲೀಕತ್ವ ಹಾಗೂ ಸ್ವಾಧೀನಾನುಭವದಲ್ಲಿ ಇಲ್ಲದಿದ್ದರೂ ಸಹ ಪ್ರತಿವಾದಿಗಳ

**ಓ ಎಸ್ ನಂಃ 10/2015**

**ಪಿ ಡಬ್ಲ್ಯೂ ಃ 1**

ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಿಃ 31.03.2012 ರಂದು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ತಾವು ಬೇರೆಯವರಿಗೆ ದಾನಪತ್ರವನ್ನು ಬರೆದುಕೊಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಒಂದರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸದರಿ ದಾನಪತ್ರವನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಇಲ್ಲಿಯತನಕ ದಾನಪತ್ರದ ಪ್ರಕಾರ ಕಂದಾಯ ದಾಖಲೆಗಳು ವರ್ಗಾವೆ ಆಗಿಲ್ಲ ಎಂದರೆ ಸಾಕ್ಷಿ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ ಕಾರಣ ಖಾತಾ ಪ್ರಕರಣ ಇನ್ನೂ ಇತ್ಯರ್ಥಕ್ಕೆ ಬಾಕಿ ಇದೆ. ಸದರಿ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇದ್ದರೂ ಸಹ ತಾವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರ ಎಂದರೆ ಸರಿಯಲ್ಲ. ಹನುಮಯ್ಯನವರು ಸಿದ್ದಪ್ಪನ ಹೆಸರಿಗೆ ಒಂದು ಮರಣ ಶಾಸನ ಬರೆದಿದ್ದಾರೆ ಎಂದರೆ ಸರಿಯಲ್ಲ. ಹನುಮಯ್ಯ ಮತ್ತು ಮುತ್ತಮ್ಮ ಸೋಮನಾಥಪುರದ ಪರಿಶಿಷ್ಟ ವರ್ಗದ ವಾಸಿಗಳು ಎಂದರೆ ಸರಿ. ಪ್ರತಿವಾದಿಗಳು ಸಹ ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಂದರೆ ಸರಿ. ಸಿದ್ದಪ್ಪ ಮುತ್ತಮ್ಮನ ತಮ್ಮ ಎಂದರೆ ಸರಿಯಲ್ಲ. ಹನುಮಯ್ಯನವರಿಗೆ ಸಂತತಿ ಇಲ್ಲದ ಕಾರಣ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸಿದ್ದಯ್ಯನವರಿಗೆ ಒಂದು ಮರಣ ಶಾಸನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**